**ದಿಃ-22-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಆರ್.ಆರ್ ವಕೀಲರಿಂದ :**

ನಾನು ಸಿ.ಎ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಚಾರಗಳನ್ನು ಓದಿ ತಿಳಿದು ನಂತರ ಸಹಿಯನ್ನು ಹಾಕಿರುತ್ತೇನೆ. ನನ್ನ ಪ್ರಕಾರ ಈ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ. ನನ್ನ ಪ್ರಮಾಣ ಪತ್ರದ 2ನೇ ಪ್ಯಾರಾಗ್ರಾಫ್ ನಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತವೆ. ನನ್ನ ಪ್ರಮಾಣ ಪತ್ರದ 2ನೇ ಪ್ಯಾರಾಗ್ರಾಫ್ ನಲ್ಲಿ ಕೋರ್ಟ್ ಕಮಿಷನರ್ ನೇಮಕ ಮಾಡಿ ಕ್ರಯ ಪತ್ರವನ್ನು ಪಡೆದುಕೊಳ್ಳಬಹುದು ಎಂದು ಬರೆದಿರುವುದು ಸತ್ಯವಾಗಿರುತ್ತದೆ. ಈ ವಿಚಾರವನ್ನು ನಿ.ಪಿ.1 ಕರಾರು ಪತ್ರದಲ್ಲಿ ನಾನು ಬರೆದಿರುತ್ತೇನೆ. ಈ ವಿಚಾರವನ್ನು ನಾನು ಸಲ್ಲಿಸಿದ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಎಲ್ಲಾ ದಾಖಲೆಗಳಿದ್ದು ಕ್ರಯ ಪತ್ರ ಮಾಡಲು ಬರದೇ ಇದ್ದ ಪಕ್ಷದಲ್ಲಿ ಕೋರ್ಟ್ ಕಮಿಷನರ್ ನನ್ನು ನೇಮಿಸಿ ಕ್ರಯ ಪತ್ರವನ್ನು ಮಾಡಬಹುದು ಎಂಬ ವಿಚಾರದಿಂದಾಗಿ ಆ ವಿಷಯವನ್ನು ನನ್ನ ಪ್ರಮಾಣ ಪತ್ರದ 2ನೇ ಪ್ಯಾರಾಗ್ರಾಫಿನಲ್ಲಿ ನಮೂದು ಮಾಡಿರುತ್ತೇನೆ. ನಿ.ಪಿ.1 ಕರಾರು ಪತ್ರದಲ್ಲಿ ಈ ವಿಚಾರವನ್ನು ಬರೆದಿಲ್ಲ ಮತ್ತು ಆ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ರಮಾದೇವಿಯವರ ಪರಿಚಯವು ನನಗೆ ಕರಾರು ಮಾಡುವ ಸಮಯವಾಗಿರುತ್ತದೆ. ಅದಕ್ಕಿಂತ ಹಿಂದೆ ನನಗೆ ಪರಿಚಯ ಇದ್ದಿರುವುದಿಲ್ಲ. ವಾದ ಪತ್ರದ ಸ್ವತ್ತಿನ ದಕ್ಷಿಣ ಭಾಗದ ಸ್ವತ್ತು ನಂ.53/03 ನನ್ನ ಸ್ವತ್ತಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯವರು ನನ್ನ ಪಕ್ಕದ ಮನೆಯ ಮಾಲೀಕರಾಗಿರುತ್ತಾರೆ. ನನ್ನ ಸ್ವತ್ತು ನಂ.53/03 ರಲ್ಲಿ ನಾನು 2014 ರಲ್ಲಿ ಕಟ್ಟಡ ಕಟ್ಟಲು ಪ್ರಾರಂಭ ಮಾಡಿರುತ್ತೇನೆ.

2014 ರಲ್ಲಿ ನಾನು ಕಟ್ಟಡ ಕಟ್ಟುತ್ತಿರುವ ಸಂದರ್ಭದಲ್ಲಿ ಪ್ರತಿವಾದಿಯವರು ನಾನು ಅವರ ಪ್ರಾಪರ್ಟಿಯನ್ನು ನಾಶಗೊಳಿಸುತ್ತಿದ್ದೇನೆ ಮತ್ತು ನಕ್ಷೆಯನ್ನು ಉಲ್ಲಂಘನೆ ಮಾಡಿರುತ್ತೇನೆ ಎಂದು ಬಿಬಿಎಂಪಿಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸರಿ. ನನ್ನ ಇನ್ನೊಂದು ಪಕ್ಕದ ಮನೆಯವರು ಸಹ ಪ್ರತಿವಾದಿಯೊಂದಿಗೆ ಸೇರಿ ಈ ದೂರನ್ನು ನೀಡಿರುತ್ತಾರೆ. ಹೀಗೆ ದೂರನ್ನು ಕೊಡುವ ಸಂದರ್ಭದಲ್ಲಿ ವಾದ ಪತ್ರದ ಸ್ವತ್ತಿನ ಕರಾರು ಆಗಿತ್ತು. ನನ್ನ ಮತ್ತು ಪ್ರತಿವಾದಿಯವರ ನಡುವೆ ಈ ದಾವಾವನ್ನು ಬಿಟ್ಟರೆ ಬೆಂಗಳೂರು ಉಚ್ಛ ನ್ಯಾಯಾಲಯದಲ್ಲಿ ಒಂದು ರಿಟ್ ಪಿಟಿಷನ್ ದಾಖಲಾಗಿರುತ್ತದೆ. ನನಗೆ ಆಕ್ಯೂಪೆನ್ಸಿ ಸರ್ಟಿಫಿಕೇಟ್ ಕೊಡಬಾರದು ಎಂದಾಗಿ ಆದೇಶವಾಗಿರುತ್ತದೆ.

ಬಿಬಿಎಂಪಿಯವರು ನಾನು ಕಟ್ಟಿದ ಕಟ್ಟಡವನ್ನು ಒಡೆದು ಹಾಕಬೇಕೆಂದು ನೋಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ರಿಟ್ ಪಿಟಿಷನ್ ನಂ.57562/2014 (ಎಲ್.ಬಿ-ಬಿಬಿಪಿ) ಇದರ ದೃಢೀಕೃತ ನಕಲನ್ನು ತೋರಿಸಿ ಇದೇ ಮಾನ್ಯ ಉಚ್ಛ ನ್ಯಾಯಾಲಯದ ಆದೇಶವೆಂದು ತಿಳಿಸಿದಾಗ ಸಾಕ್ಷಿಯು ಪರಾಂಬರಿಸಿ ಹೌದು ಎಂದು ನುಡಿಯುತ್ತಾರೆ. ಅದನ್ನು ಈಗ ನಿ.ಡಿ.1 ಎಂದು ಗುರುತಿಲಾಯಿತು.

ನಾನು ನನ್ನ ಸ್ವತ್ತಿನಲ್ಲಿರುವ ಕಟ್ಟಡವನ್ನು 2014 ರ ಯಾವ ತಿಂಗಳಿನಲ್ಲಿ ಕಟ್ಟಿದ್ದೇನೆಂದು ನನಗೀಗ ನೆನಪಾಗುವುದಿಲ್ಲ. ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ನಾನು ಹೇಳಿದಂತೆ ಆಕ್ಯೂಪೆನ್ಸಿ ಸರ್ಟಿಫಿಕೇಟ್ ಕೊಡಬಾರದು ಎಂದು ಆದೇಶವಾಗಿರದೆ ನಾನು ಕಟ್ಟಿದ ಕಟ್ಟಡವನ್ನು ಒಡೆದು ಹಾಕಲು ಆದೇಶವಾಗಿದೆ ಎಂದರೆ ಸರಿಯಲ್ಲ. ಈ ಒಂದು ವಿವಾದದಿಂದಾಗಿ ನನಗೆ ಪ್ರತಿವಾದಿಯವರ ಮೇಲೆ ವೈಮನಸ್ಸಿದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿರುವ ಕಟ್ಟಡವು ಹಳೆಯ ಕಟ್ಟಡವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದಕ್ಕೆ 8-9 ವರ್ಷವಾಗಿರುತ್ತದೆ. ನನ್ನ ದಾವಾ ಸ್ವತ್ತಿನಲ್ಲಿ ರಮಾದೇವಿಯವರು ಮನೆ ಕಟ್ಟಿದ್ದಾರಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರ ಆದ ನಂತರ ನಾನು ರಮಾದೇವಿಯವರಿಗೆ ಆದ ವಾದ ಪತ್ರದ ಸ್ವತ್ತಿನ ಕ್ರಯ ಪತ್ರವನ್ನು ನೋಡಿರುತ್ತೇನೆ.

2007 ನೇ ಇಸವಿಯಲ್ಲಿ ರಮಾದೇವಿಯವರು ವಾದ ಪತ್ರದ ಸ್ವತ್ತನ್ನು ಕೊಂಡುಕೊಂಡಿರುತ್ತಾರೆ. ಸಾಕ್ಷಿ ಮುಂದುವರಿದು ನನಗೆ ಕರಾರು ಆದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 2007 ನೇ ಇಸವಿಯಲ್ಲಿ ರಮಾದೇವಿಯವರು ವಾದ ಪತ್ರದ ಸ್ವತ್ತನ್ನು ಕೊಂಡುಕೊಳ್ಳುವ ಸಮಯದಲ್ಲಿ ಮನೆಯೊಂದಿಗೆ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಕರಾರು ಆದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ಪ್ರತಿವಾದಿಯವರು ಮಾರಾಟ ಮಾಡುತ್ತಿದ್ದಾರೆ ಎಂಬ ವಿಚಾರವು ನನಗೆ ಬ್ರೋಕರ್ ಮುಖಾಂತರ ತಿಳಿದು ಬಂದಿರುತ್ತದೆ. ಈ ಬಗ್ಗೆ ನಾನು ಪ್ರತಿವಾದಿಯವರೊಂದಿಗೆ ಮಾತುಕತೆಯನ್ನು ಮಾಡಿರುತ್ತೇನೆ. ಮಾತುಕತೆಯಾದ ನಂತರ ನಾನು ಪ್ರತಿವಾದಿಯವರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಯನ್ನು ಕೊಡುವಂತೆ ಕೇಳಿಕೊಂಡಿರುತ್ತೇನೆ ಆದರೆ ಅವರು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರಿದು ನನಗೆ ಕರಾರು ಪತ್ರದ ಡ್ರಾಫ್ಟ್ ಅನ್ನು ಮಾತ್ರ ಕಳುಹಿಸಿ ಕೊಟ್ಟಿರುತ್ತಾರೆ. ನಿ.ಪಿ.1 ನ್ನು ಮಾಡುವ ಸಂದರ್ಭದಲ್ಲಿ ನಾನು ಯಾವುದೇ ದಾಖಲಾತಿಗಳನ್ನು ವಾದ ಪತ್ರದ ಸ್ವತ್ತಿನ ಬಗ್ಗೆ ನೋಡಿರುವುದಿಲ್ಲ ಎಂದರೆ ಸರಿ. ನಾನು ಕರಾರು ಪತ್ರದ ಡ್ರಾಫ್ಟ್ ಅನ್ನು ಕಳುಹಿಸಿ ಅದನ್ನು ಅಂಗೀಕಾರ ಮಾಡುವಂತಹ ಸಂದರ್ಭದಲ್ಲಿ ಮತ್ತು ಕರಾರು ಪತ್ರ ಮಾಡುವ ಸಂದರ್ಭದಲ್ಲಿ ವಾದ ಪತ್ರದ ಸ್ವತ್ತಿನ

ದಾಖಲಾತಿಗಳನ್ನು ಕೇಳಿರುತ್ತೇನೆ ಆದರೆ ಪ್ರತಿವಾದಿಯವರು ದಾಖಲಾತಿಗಳು ಎಲ್ಲವೂ ಬ್ಯಾಂಕಿನಲ್ಲಿರುತ್ತವೆ ಎಂದು ನುಡಿದಿರುತ್ತಾರೆ. ನಾನು 2 ದಾಖಲಾತಿಗೆ ಸಹಿ ಮಾಡುವ ಸಂದರ್ಭದಲ್ಲಿ ನನ್ನನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ದಾಖಲಾತಿಗಳನ್ನು ತೋರಿಸುವಂತೆ ಕೇಳಿಕೊಂಡಿರುತ್ತೇನೆ ಆದರೆ ಅವರು ಕರೆದುಕೊಂಡು ಹೋಗಿರುವುದಿಲ್ಲ. ಬ್ಯಾಂಕಿನಲ್ಲಿ ಎಲ್ಲಾ ದಾಖಲಾತಿಗಳು ಇರುತ್ತದೆ ಎಂದು ಬ್ರೋಕರ್ ರವರು ಎಲ್ಲಾ ದಾಖಲಾತಿಗಳನ್ನು ಆಮೇಲೆ ಕೊಡುತ್ತಾರೆ ಎಂದು ಹೇಳಿದ್ದನ್ನು ನಂಬಿ ನಾನು ಮೇಲಿನ ದಾಖಲಾತಿಗಳಿಗೆ ಸಹಿ ಮಾಡಿರುತ್ತೇನೆ.

ವಾದ ಪತ್ರದ ಸ್ವತ್ತಿನ ದಾಖಲಾತಿಗಳ ಬಗ್ಗೆ ಕರಾರು ಪತ್ರ ಆದ 15 ದಿನಗಳ ನಂತರ ನನಗೆ ಅವರು ಕೊಟ್ಟಿರುತ್ತಾರೆ. ಕರಾರು ಪತ್ರದಲ್ಲಿ ಕರಾರು ಪತ್ರ ಆದ 15 ದಿನಗಳ ನಂತರ ವಾದ ಪತ್ರದ ಸ್ವತ್ತಿನ ದಾಖಲಾತಿಗಳ ನಕಲನ್ನು ಕೊಡುವ ಬಗ್ಗೆ ಕರಾರು ಪತ್ರದಲ್ಲಿ ಬರೆದಿರುವುದಿಲ್ಲ. ಸಾಕ್ಷಿಯು ಮುಂದುವರಿದು ಪ್ರತಿವಾದಿಯವರು ಬರೆಸಿರುವುದಿಲ್ಲ ಎಂದು ನುಡಿದಿರುತ್ತಾರೆ.

ನಿ.ಪಿ.1 ಕರಾರು ಪತ್ರದಲ್ಲಿ ವಿಧಿಸಿರುವ ನಿಬಂಧನೆಗಳು ನನಗೆ ಗೊತ್ತಿರುತ್ತವೆ. ನಿ.ಪಿ.1 ಕರಾರು ಪತ್ರವನ್ನು ಮಾಡುವ ಸಂದರ್ಭದಲ್ಲಿ ನನ್ನಲ್ಲಿ ಒಂದು ಕೋಟಿ ನಲ್ವತ್ತೈದು ಲಕ್ಷ ಹಣ ಇತ್ತು ಎನ್ನುವ ಬಗ್ಗೆ ದಾಖಲಾತಿ ಇದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಹತ್ತಿರ ಅಷ್ಟು ಹಣ ಇಲ್ಲದ ಕಾರಣ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ. ನನ್ನಲ್ಲಿ ಮಾರ್ಜಿನ್ ಹಣ ಮಾತ್ರ ಇತ್ತು. ಈ ಬಗ್ಗೆ ನಾನು ಕರಾರಿನಲ್ಲಿ ನಮೂದಿಸಿರುತ್ತೇನೆ.

ನಾನು ನಿ.ಪಿ.1 ಕರಾರು ಪತ್ರ ಮಾಡುವ ದಿನವೇ ಮುಂಗಡ ಹಣವನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ತಾನು ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 3 ನೇ ಪ್ಯಾರಾವನ್ನು ತೋರಿಸಿ ಪ್ರತಿವಾದಿಯವರಿಗೆ ದಿನಾಂಕ 30.10.2012 ರಂದು

ರೂ.5,00,000/- ವನ್ನು ಮುಂಗಡ ಹಣವನ್ನಾಗಿ ಪೇ ಆರ್ಡರ್ ಮುಖಾಂತರ ನೀಡಿದ್ದೇನೆಂದು ಬರೆಸಿರುತ್ತೇನೆ ಎಂದರೆ ಸರಿ. ಇದೇ ವಿಚಾರವನ್ನು ನನ್ನ ವಾದ ಪತ್ರದ ಪ್ಯಾರಾ ನಂ.4 ರಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಾನು ಮೇಲೆ ತಪ್ಪಾಗಿರುವ ವಿಚಾರವನ್ನು ಪ್ರಮಾಣ ಪತ್ರವನ್ನು ಸಹಿ ಮಾಡುವ ಸಂದರ್ಭದಲ್ಲಿ ಹೇಳಿರುವುದಿಲ್ಲ. ಸಾಕ್ಷಿ ಮುಂದುವರಿದು ಓವರ್ ಸೈಟ್ ನಿಂದ ಅದನ್ನು ಹೇಳಲಾಗಿರುವುದಿಲ್ಲ. ದಾವಾ ಹಾಕುವ ಸಂದರ್ಭದಲ್ಲಿ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ನಿ.ಪಿ.1 ರ ನಿಬಂಧನೆಗಳ ಪ್ರಕಾರ ಕ್ರಯ ಪತ್ರವನ್ನು ಕರಾರು ಪತ್ರ ಮಾಡಿದ ಒಂದು ತಿಂಗಳ ಒಳಗಡೆ ಮಾಡಬೇಕಾಗಿತ್ತು. ನಿ.ಪಿ.1 ಆಗುವ ಸಂದರ್ಭದಲ್ಲಿ ನೆಲಮಹಡಿ ಮತ್ತು 1 ನೇ ಮಹಡಿಯಲ್ಲಿ ಪ್ರತಿವಾದಿಯವರ ಬಾಡಿಗೆದಾರರು ಇದ್ದರು ಎಂದರೆ ಸರಿ. ಬಾಡಿಗೆಯ ಆಧಾರದಿಂದಲೇ ಪ್ರತಿವಾದಿಯವರು ತಮ್ಮ ಜೀವನ ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. ನಿ.ಪಿ.1 ಆದ 15 ದಿನಗಳ ಒಳಗಡೆ ಪ್ರತಿವಾದಿಯವರು ಆ ಇಬ್ಬರು ಬಾಡಿಗೆದಾರರನ್ನು ಖಾಲಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 6 ತಿಂಗಳ ನಂತರ ಖಾಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು 3 ತಿಂಗಳ ಒಳಗಡೆ ಪ್ರತಿವಾದಿಯವರು ಬಾಡಿಗೆದಾರರನ್ನು ಖಾಲಿ ಮಾಡಿಕೊಡುವಂತೆ ನೋಟೀಸನ್ನು ಕೊಟ್ಟಿದ್ದೇನೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು 1 ತಿಂಗಳಲ್ಲಿಯೇ ನೋಟೀಸನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.2 ನ್ನು ಸಾಕ್ಷಿಗೆ ತೋರಿಸಿ ತಾನು ಕೊಟ್ಟ ನೋಟೀಸು ಇದೆಯೇ ಎಂದು ಕೇಳಿದಾಗ ಸಾಕ್ಷಿಯು ಅದನ್ನು ಪರಾಂಬರಿಸಿ ಆ ನೋಟೀಸು ಅಲ್ಲ ಎಂದು ನುಡಿಯುತ್ತಾರೆ. ಬಾಡಿಗೆದಾರರನ್ನು ಖಾಲಿ ಮಾಡಿಸುವಂತೆ ಕುರಿತಾಗಿ ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಪ್ರತಿವಾದಿ ವಕೀಲರು ಒಂದು ಛಾಯಾ ಚಿತ್ರವನ್ನು ತೋರಿಸಿ ದಾವಾವನ್ನು ಹಾಕಿದ ನಂತರ ದಾವಾ ಸ್ವತ್ತಿನಲ್ಲಿ ಪ್ರಕರಣದ ಸಂಖ್ಯೆಯನ್ನು ನಮೂದಿಸಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ಪರಾಂಬರಿಸಿ ಹೌದು ಎಂದು ನುಡಿಯುತ್ತಾರೆ. (ಛಾಯಾ ಚಿತ್ರದ ಬಗ್ಗೆ ಯಾವುದೇ ಸಿ.ಡಿ. ಅಥವಾ ಕಲಂ 65 ಬಿ ಸಾಕ್ಷ್ಯ ಅಧಿನಿಯಮದಂತೆ ಪ್ರಮಾಣ ಪತ್ರ ಇಲ್ಲದೇ ಇದ್ದುದ್ದರಿಂದ ಅದನ್ನು ನಿಶಾನೆಯನ್ನಾಗಿ ಗುರುತಿಸಲಾಗಿಲ್ಲ). ನಾನು ಆ ರೀತಿ ವಾದ ಪತ್ರದ ಸ್ವತ್ತಿನಲ್ಲಿ ದಾವಾ ಸಂಖ್ಯೆಯನ್ನು ಬರೆಸಿದ ನಂತರ ಬಾಡಿಗೆದಾರರು ಬಂದು ನೋಡಿ ಹೋಗುತ್ತಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ.

2016 ರಲ್ಲಿ ದಾವಾ ಹೂಡುವ ಸಂದರ್ಭದಲ್ಲಿ ದಾವಾ ಸ್ವತ್ತಿನಲ್ಲಿ ಬಾಡಿಗೆದಾರರು ಇದ್ದರು ಆನಂತರ ಅವರು ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಬಾಡಿಗೆದಾರರು ಎಷ್ಟು ವರ್ಷದವರೆಗೆ ಅಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಬಾಡಿಗೆದಾರರನ್ನು ಖಾಲಿ ಮಾಡಿಸಿಲ್ಲವೆಂದು ನಾನು ಹೇಳಿರುವುದಿಲ್ಲ.

ನಿ.ಪಿ.2 ನ್ನು ಕೊಡುವ ಪೂರ್ವದಲ್ಲಿ ಕರ್ನಾಟಕ ಬ್ಯಾಂಕಿಗೆ ಹೋಗಿ ಲೋನಿನ ಬಗ್ಗೆ ವಿಚಾರಿಸಿರುತ್ತೇನೆ. ಆ ಸಮಯದಲ್ಲಿ ಬ್ಯಾಂಕಿನಲ್ಲಿ ಕಾನೂನು ಅಧಿಕಾರಿಗಳು ಸಾಲವನ್ನು ಪುರಸ್ಕರಿಸಬೇಕಾದರೆ ನಿರ್ದಿಷ್ಟವಾದ ದಾಖಲೆಗಳು ಬೇಕೆಂದು ಬಾಯ್ದರೆಯಾಗಿ ಹೇಳಿರುತ್ತಾರೆ. ನಾನು ನಿ.ಪಿ.2 ರಲ್ಲಿ ಬ್ಯಾಂಕಿನವರು ನಿರ್ದಿಷ್ಟವಾದ ದಾಖಲೆಗಳು ಬೇಕೆಂದು ಕೇಳಿದ್ದಾರೆಂದು ನಮೂದಿಸಿರುವುದಿಲ್ಲ ಆದರೆ ವಕೀಲರು ಬೇಕೆಂದು ಕೇಳಿದ ಬಗ್ಗೆ ನಮೂದಿಸಿದ್ದೇನೆ. ನಾನು ಯಾವ ವಕೀಲರನ್ನು ಭೇಟಿಯಾಗಿ ಅಭಿಪ್ರಾಯ ಕೇಳಿದ್ದೇನೆಂದು ನನಗೀಗ ನೆನಪಿಲ್ಲ. ನಿ.ಪಿ.2 ರಲ್ಲಿ ವಕೀಲರ ಹೆಸರನ್ನು ನಮೂದಿಸಿರುವುದಿಲ್ಲ. ನಾನು ಯಾವುದೇ ಬ್ಯಾಂಕಿನ ಅಧಿಕಾರಿ ಅಥವಾ ಕಾನೂನು

ಅಧಿಕಾರಿಗಳನ್ನು ಅಥವಾ ವಕೀಲರನ್ನು ಭೇಟಿಯಾಗದೇ ನಾನೇ ಸ್ವತಃ ಈ ನೋಟೀಸನ್ನು ಪ್ರತಿವಾದಿಯವರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನಾನು ಕ್ರಯ ಪತ್ರವನ್ನು ಕರಾರು ಪತ್ರಮಾಡಿದ ಒಂದು ತಿಂಗಳು ನಿರ್ದಿಷ್ಟ ದಿನಾಂಕ ಇರುವ 6 ದಿನಗಳ ಮುಂಚಿತವಾಗಿ ಈ ನಿ.ಪಿ.2 ನೋಟೀಸನ್ನು ಪ್ರತಿವಾದಿಯವರಿಗೆ ನೀಡಿರುತ್ತೇನೆ. ನಿ.ಪಿ.2 ಪ್ರತಿವಾದಿಯವರಿಗೆ ಸರ್ವ್ ಆಗದೇ ವಾಪಾಸು ಬಂದಿರುತ್ತದೆ. ನಿ.ಪಿ.2 ನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಿ.ಪಿ.2 ನೋಟೀಸು ಪ್ರತಿವಾದಿಯವರಿಗೆ ತಲುಪಬಾರದೆಂಬ ದುರುದ್ದೇಶದಿಂದ ನಿ.ಪಿ.5 ನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**